**ದಿಃ 16.07.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**<u>ಪಾಟೀ ಸವಾಲು ಪ್ರತಿವಾದಿ ನಂ.1 ಮತ್ತು 2 ರವರ ಪರ ವಕೀಲರಿಂದಃ</u>**

ನಾನು 10ನೇ ತರಗತಿವರೆಗೆ ಕಲಿತಿರುತ್ತೇನೆ. ನನಗೆ ಇಂಗ್ಲೀಷ ಭಾಷೆ ಸ್ವಲ್ಪ ಮಾತ್ರ ಅರ್ಥವಾಗುತ್ತದೆ, ಕನ್ನಡ ಭಾಷೆ ಬರುತ್ತದೆ. ನನ್ನ ಜನ್ಮ ದಿಃ01-06-1972. ದಾವೆ ಸಲ್ಲಿಸಿಸಲು ಮಾಹಿತಯನ್ನು ನನ್ನ ವಕೀಲರು ನೀಡಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ತಯಾರಿಸಲು ನನ್ನ ವಕೀಲರೆ ಮಾಹಿತಿ ನೀಡಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಷಯಗಳನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಸದರಿ ಪ್ರಮಾಣ ಪತ್ರವನ್ನು ಓದಿ ಹೇಳಿದ ನಂತರ ನಾನು ಸಹಿ ಮಾಡಿರುತ್ತೇನೆ. ಪ್ರಮಾಣ ಪತ್ರದಲ್ಲಿ ನಾವು 8ಎಕರೆ ಜಮೀನನ್ನು ಮಾರಾಟ ಮಾಡಿದ್ದು 2 ಎಕರೆ 10 ಗುಂಟೆ ಜಮೀನು ನಮಗೆ ಉಳಿದ ಬಗ್ಗೆ ಬರೆದಿರುತ್ತದೆ.

2. ದಾವಾ ಸ್ವತ್ತು ಮೂಲತಹ ದೇಸಾಯಿಯವರಿಗೆ ಸೇರಿದ್ದು ಆಗಿರುತ್ತದೆ. ದಾವಾ ಸ್ವತ್ತಿನ ಸಂಖ್ಯೆ ಸರ್ವೇ ನಂ. 106/1 ಆಗಿರುತ್ತದೆ. ಸರ್ವೇ ನಂಬರ 106 ಜಮೀನು ಒಟ್ಟು 22 ಎಕರೆ 21 ಗುಂಟೆ ವಿಸ್ತೀರ್ಣದ್ದ ಆಗಿರುತ್ತದೆ. ಅದರಲ್ಲಿ 7 ಎಕರೆ ಕರಾಬು ಜಮೀನು ಆಗಿರುತ್ತದೆ. ಸದರಿ ಕರಾಬು ಅ ಕರಾಬು ಅಥವಾ ಬ ಕರಾಬು ಇರುತ್ತದೆ ಎನ್ನುವ ಬಗ್ಗೆ ನಾನು ಪರಿಶೀಲಿಸಿರುವುದಿಲ್ಲ. ಪ್ರಸ್ತೂತ ದಾವೆಯನ್ನು ನಾನು 2 ಎಕರೆ 10 ಗುಂಟೆಗೆ ಸಂಬಂದಿಸಿದಂತೆ ಸಲ್ಲಿಸಿರುತ್ತೇನೆ. ದಾದಾ ಸ್ವತ್ತಿನ ಚಕ್ಬಂದಿ ಪೂರ್ವಕ್ಕೆ- ವೀರುಪಾಕ್ಷಪ್ಪಾ ದಾಸರ ಅವರ ಜಮೀನು, ಪಶ್ಚಿಮಕ್ಕೆ -ಪರಪ್ಪಾ ತಟ್ಟಿಮನಿ ಅವರು ಜಮೀನು, ದಕ್ಷಿಣಕ್ಕೆ ಕರೇಪ್ಪಾ ಮಿರ್ಜಿ ಅವರ ಜಮೀನು, ಉತ್ತರಕ್ಕೆ -ಪರಪ್ಪಾ ತಟ್ಟಿಮನಿ ಅವರ ಜಮೀನು ಇರುತ್ತದೆ. ದಾವಾ ಯನ್ನು ನಾನು ದಾವಾ ಜಮೀನು ನನ್ನದಾಗಿರುತ್ತದೆ ಎಂದು ಕೋರಿ ಸಲ್ಲಿಸಿರುತ್ತೇನೆ.

3. ನನ್ನ ಅಜ್ಜನ ಹೆಸರು ನಶೇಸಾಬ ಮೀರಾಸಾಬ ಜಟ್ಟರ್ ಇದ್ದು ಈಗ ಅವರ ಅಡ್ಡ ಹೆಸರು ಮುಲ್ತಾನಿ ಆಗಿರುತ್ತದೆ. ನಮ್ಮ ಅಡ್ಡ ಹೆಸರು ಜಟ್ಟರನಿಂದ ಮುಲ್ತಾನಿ ಆದ ಬಗ್ಗೆ ತೋರಿಸಲು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ಸದರಿ ಅಜ್ಜನಿಗೆ ರಾಜೇಸಾಬ ಮುಲ್ತಾನಿ, ಬಾಬಾಸಾಬ ಮುಲ್ತಾನಿ ಎಂಬ ಇಬ್ಬರು ಮಕ್ಕಳಿರುತ್ತಾರೆ, ಹೆಣ್ಣು ಮಕ್ಕಳು ಇರುವುದಿಲ್ಲ. ನನ್ನ ಅಜ್ಜನ ಹೆಂಡತಿಯ ಹೆಸರು ಮೀರಾಮಾ. ಸದರಿ 106ರ ಜಮೀನಿನಲ್ಲಿ ರಾಜೇಸಾಬ ಮುಲ್ತಾನಿಯವರಿಗೆ 10 ಎಕರೆ 11 ಗುಂಟೆ , ಬಾಬಾಸಾಬ ಮುಲ್ತಾನಿ ಯವರಿಗೆ 10 ಎಕರೆ 10 ಗುಂಟೆ ಹಿಸ್ಸೆ ಬಂದಿರುತ್ತದೆ. ರಾಜೇಸಾಬ ಮುಲ್ತಾನಿಯವರು ದಿಃ 14-09-1953ರಲ್ಲಿ 6 ಎಕರೆ 31 ಗುಂಟೆ ಸಾಗುವಳಿ 3 ಎಕರೆ 20ಗುಂಟೆ ಕರಾಬು ಜಮೀನನ್ನು ರೂಪಾಯಿಗೆ 500/-ಕ್ಕೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಆ ಪ್ರಕಾರ ಪರಪ್ಪಾ ನಿಂಗಪ್ಪಾ ತಟ್ಟಿಮನಿಯವರು ತಮ್ಮ ಹೆಸರನ್ನು ಕಂದಾಯ ದಾಖಲೆಗಳಲ್ಲಿ ಡೈರಿ ನಂ. 926ರಂತೆ

ನಮೂದಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಡೈರಿಯ ಪ್ರಕಾರ ಹಿಸ್ಸೆ 106/1 ಸದರಿ ತಟ್ಟಿಮನಿಯವರ ಹೆಸರಿಗೆ, 106/2 ಸಾಗುವಳಿ 6 ಎಕರೆ 30 ಗುಂಟೆ ಮತ್ತು ಪೋಟ ಕರಾಬ 3 ಎಕರೆ 20 ಗುಂಟೆ ನನ್ನ ತಂದೆ ಬಾಬಾಸಾಬರವರ ಹೆಸರಿಗೆ ನಮೂದಾಯಿತು ಎಂದರೆ ಸರಿ.

4. 1963ರಲ್ಲಿ ನನ್ನ ತಂದೆ ಉಪವಿಭಾಗಾಧಿಕಾರಿ ಬೈಲಹೊಂಗಲರವರಿಂದ ಮರು ಮಂಜೂರು ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಮರು ಮಂಜೂರಾತಿ ಪ್ರಕಾರ ಡೆಪ್ಯೈ ನಂ.2808ರಂತೆ ನನ್ನ ತಂದೆಯ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ಅದೆ ಪ್ರಕಾರ ನನ್ನ ತಂದೆ ದಿಃ 165-02-1964ರಂದು ರೈತಾವ ಅನುಮತಿಯನ್ನು ಪಡೆದುಕೊಂಡಿದ್ದು, ದಿಃ 22-06-1967ರಂದು ಡೈರಿ ನಂ. 3198 ರಡಿಯಲ್ಲಿ ಅವರು ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ದಿಃ 24-07-1967ರಂದು ನಂನ್ನ ತಂದೆ 1ನೇ ಪ್ರತಿವಾದಿಗೆ ಮಾರಟ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು 8 ಎಕರೆ ಜಮೀನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-5ರಲ್ಲಿ ಮಾರಾಟ ಮಾಡಿದ ಜಮೀನಿನ ಚಕ್‌ಬಂದಿ ನಮೂದಿಸಲಾಗಿರುತ್ತದೆ ಎಂದರೆ ಸರಿ. ನಿಪಿ-5ರಲ್ಲಿ ಇರುವ ಚಕ್‌ಬಂದಿ ಸರಿಯಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-5ರಲ್ಲಿ ಇರುವ ಚಕ್ ಬಂದಿಯಲ್ಲಿಯೆ, ನನ್ನ ತಂದೆಗೆ ಮರು ಮಂಜೂರಾಗಿದ್ದ ಜಮೀನು ಇತ್ತು ಎಂದರೆ ಸರಿಯಲ್ಲ .ನನ್ನ ದೊಡ್ಡಪ್ಪಾ ರಾಜೇಸಾಬ, ತಟ್ಟಿಮನಿಯವರಿಗೆ ಮಾರಾಟ ಮಾಡಿದಾಗ ನಾನು ಹುಟ್ಟಿರಲಿಲ್ಲ ಎಂದರೆ ಸರಿ. ಸದರಿ ಡೈರಿ ನಂ. 926 ನಮೂದಾದ ದಿನಾಂಕದಂದು ನಾನು ಹುಟ್ಟಿರಲಿಲ್ಲ ಎಂದರೆ ಸರಿ. ಅದೆ ರೀತಿ 1963-64 ರಲ್ಲಿ ರೈತಾವ ಆದಾಗಲು ಸಹ ನಾನು ಹುಟ್ಟಿರಲಿಲ್ಲ ಎಂದರೆ ಸರಿ. ಅದೆ ರೀತಿ ನನ್ನ ತಂದೆ 1ನೆ ಪ್ರತಿವಾದಿಗೆ ಜಮೀನು ಮಾರಾಟ ಮಾಡಿದಾಗಲೂ ಸಹ ನಾನು ಹುಟ್ಟಿರಲಿಲ್ಲ ಎಂದರೆ ಸರಿ. 1ನೆ ಪ್ರತಿವಾದಿಗೆ ಜಮೀನು

ಮಾರಾಟ ಮಾಡಿದ 5 ವರ್ಷಗಳ ನಂತರ ನಾನು ಜನಿಸಿರುತ್ತೇನೆ ಎಂದರೆ ಸರಿ. ನನ್ನ ತಂದೆ ನಾನು ಹುಟ್ಟುವ ಮೋದಲು ಮಾಡಿರುವಂತಹ ಜಮೀನಿನ ವ್ಯವಹಾರಗಳ ಬಗ್ಗೆ ನನಗೆ ವೈಯಕ್ತಿಕ ಪ್ರತ್ಯಕ್ಷ ಮಾಹಿತಿ ಇರುವುದಿಲ್ಲ.

5. ನನ್ನ ತಂದೆ 1975ರಲ್ಲಿ ಮರಣ ಹೊಂದಿರುತ್ತಾರೆ. ಅವರ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುತ್ತೇನೆ. ನನ್ನ ತಾಯಿ 8 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನನ್ನ ತಂದೆ ತಾಯಿಗೆ ಇಬ್ಬರು ಗಂಡು ಮಕ್ಕಳು ಮಾತ್ರವಿದ್ದು ಹೆಣ್ಣು ಮಕ್ಕಳು ಇರುವುದಿಲ್ಲ. ನನ್ನ ತಂದೆಯ ಮರಣದ ನಂತರ ಮರಣ ಪ್ರಮಾಣ ಪತ್ರವನ್ನು ಪಡೆದು ನೋಡಿರುವುದಿಲ್ಲ, ಅದೆ ರೀತಿ ವಾರಸಾ ಮಾಡಲು ಅರ್ಜಿಯನ್ನು ನೀಡಿರುವುದಿಲ್ಲ. 1975ರಲ್ಲಿ ದಾವಾ ಆಸ್ತಿ ನಮ್ಮ ಕುಟುಂಬಂದ ಆಸ್ತಿ ಎಂದು ನನ್ನ ತಾಯಿಗೆ ಗೊತ್ತಿತ್ತು. ನನ್ನ ತಾಯಿ ಜೀವಿತಾ ಅವಧಿಯಲ್ಲಿ ವಾರಸಾ ಪ್ರಮಾಣ ಪತ್ರವನ್ನು ಪಡೆದಿರುವುದಿಲ್ಲ ಮತ್ತು ಅರ್ಜಿಯನ್ನು ಸಹ ನೀಡಿರುವುದಿಲ್ಲ. ನನ್ನ ತಾಯಿ ಮರಣ ಹೊಂದಿದಾಗ ನನಗೆ 42 ವರ್ಷವಿದ್ದು , 1ನೇ ವಾದಿ 50–51 ವರ್ಷ ವಿತ್ತು . ನನಗೆ ಹಾಗೂ ನನ್ನ ಅಣ್ಣನಿಗೆ 18 ವರ್ಷಕ್ಕೆ ವ್ಯವಹಾರ ಜ್ಞಾನ ಬಂದಿರುತ್ತದೆ. ನನ್ನ ತಾಯಿಯ ಮರಣಾ ನಂತರ ನಮಗೆ ನಮ್ಮ ಜಮೀನಿನ ಬಗ್ಗೆ ಮಾಹಿತಿ ಇತ್ತು. ನಾನಾಗಾಲಿ 1 ನೆ ವಾದಿ ಆಗಲಿ ವಾರಸಾ ಪ್ರಮಾಣ ಪತ್ರ ಪಡೆದು ಜಮೀನಿಗೆ ವಾರಾಸಾ ನಾತೆಯಿಂದ ನಮ್ಮ ಹೆಸರುಗಳನ್ನು ನಮೂದು ಮಾಡಿಸಿಕೊಳ್ಳಲು ಅರ್ಜಿ ನೀಡಿರುವುದಿಲ್ಲ. ಅರ್ಜಿ ನೀಡಲು ನಮಗೆ ಉತಾರೆಯಲ್ಲಿ ಅಡಚಣೆ ಇತ್ತು. ಕಂದಾಯ ಕಛೇರಿಯವರು, ಜಮೀನಿಗೆ ನಮ್ಮ ಹೆಸರು ಇರದ ಕಾರಣ ವಾರಸಾ ಮಾಡಲು ಬರುವುದಿಲ್ಲ ಎಂದು ಹೇಳಿದರು. ಸದರಿ ಯವರಿ ಹತ್ತಿರ ನಾವು ಅರ್ಜಿ ತೆಗೆದುಕೊಂಡು ಹೋಗಿದ್ದೇವು. ಸದರಿಯವರ ಹತ್ತಿರ 2008ರಲ್ಲಿ ಹೊಗಿದ್ದೇವು. ಸದರಿ ಅರ್ಜಿಯ ಪ್ರತಿ ಲಭ್ಯವಿದ್ದರೆ ಹಾಜರು ಪಡಿಸುತ್ತೇನೆ.

6. 1985ರಲ್ಲಿ 1ನೇ ಪ್ರತಿವಾದಿ , 2 ಮತ್ತು 3 ನೇ ಪ್ರತಿವಾದಿಗೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಮಾರಾಟ ಮಾಡಿದ ದಿನವೆ 1 ನೇ ಪ್ರತಿವಾದಿ 2-3ನೇ ಪ್ರತಿವಾದಿಗಳಿಗೆ ಜಮೀನಿನ ಸ್ವಾದಿನ ನೀಡಿರುತ್ತಾರೆ ಎಂದರೆ ನನಗೆ ಗೋತ್ತಿಲ್ಲ. ಸದರಿ ಖರೀದಿ ಪ್ರಕಾರ ಉತಾರಯಲ್ಲಿ 2 ಮತ್ತು 3 ನೇ ಪ್ರತಿವಾದಿಗಳ ಹೆಸರು ನಮೂದಾಗಿರುತ್ತವೆ ಎಂದರೆ ಸರಿ. 2 ಮತ್ತು 3ನೇ ಪ್ರತಿವಾದಿಗಳ ಹಾಗೂ 1 ನೇ ಪ್ರತಿವಾದಿಯ ಹೆಸರು ನಮೂದಾಗಿರುವ ಡೈರಿ ನಂ.6084 ಮತ್ತು 4440ನ್ನು ಪ್ರಶ್ನಿಸಿ ಉಪವಿಬಾಗಾಧಿಕಾರಿಗಳು ಬೈಲಹೊಂಗಲ ರವರ ನ್ಯಾಯಾಲಯದಲ್ಲಿ ಆರಟಿಎ ನಂ. 54/2008-9 ಮತ್ತು 55/2008-9 ಪ್ರಕರಣಗಳನ್ನು ದಾಖಲಿಸಿರುತ್ತೇವೆ ಎಂದರೆ ಸರಿ. ಸದರಿ ಡೈರಿಗಳನ್ನು 35 ವರ್ಷಗಳ ನಂತರ ಪ್ರಶ್ನಿಸಿರುತ್ತೇವೆ ಎಂದರೆ ಸರಿ. ನಾವು ಮೊದಲ ಬಾರಿ ನಮ್ಮ ಆಸ್ತಿಗೆ ಸಂಬಂದ ಪಟ್ಟಂತೆ 2008-9ನೇ ಸಾಲಿನಲ್ಲಿ ಪ್ರಕರಣಗಳನ್ನು ದಾಖಲಿಸಲು ಪ್ರಾರಂಬಿಸಿರುತ್ತೇವೆ ಎಂದರೆ ಸರಿ. ಸದರಿ ಪರಕರಣಗಳಲ್ಲಿ ಡೈರಿಗಳನ್ನು ರದ್ದು ಪಡಿಸಿ, ತಹಶೀಲ್ದಾರ ರವರು ಪಕ್ಷಗಾರರಿಗೆ ನೋಟಿಸಗಳನ್ನು ನೀಡಿ ಪ್ರಕರಣಗಳನ್ನು ತನಿಖೆ ಮಾಬೇಕೆಂದು ನಿರ್ದೇಶನ ನೀಡಿದರು ಎಂದರೆ ಸರಿ. ಆ ಪ್ರಕಾರ ಶಹಶೀಲ್ದಾರವರ ಮುಂದೆ ಪ್ರಕರಣಗಳು ನಡೆದವು ಎಂದರೆ ಸರಿಯಲ್ಲ . ಸದರಿ ನಿರ್ದೇಶನ ಮೆರೆಗೆ ತಹಶೀಲ್ದಾರವರಿಗೆ ಅರ್ಜಿಯನ್ನು ನೀಡಿರುತ್ತೇವೆ. ಸದರಿ ಅರ್ಜಿಯ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಸದರಿ ಉಪ ವಿಬಾಗಾದಿಕಾರಿಗಳ ಆದೇಶಗಳನ್ನು ಪ್ರಶ್ನಿಸಿ 2ಮತ್ತು 3ನೇ ಪ್ರತಿವಾದಿಗಳು ಜೀಲ್ಲಾ ಅಧಿಕಾರಿಗಳು ಬೆಳಗಾವಿರವರಿಗೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದರ ಮೇಲ್ಮನವಿಯಲ್ಲಿ ನಾವು ನಮ್ಮ ವಕೀಲರು ಮುಖಾಂತರ ಹಾಜರಾಗಿರುತ್ತೇವೆ ಎಂದರೆ ಸರಿ. ಈಗಲೂ ಸಹ ಸದರಿ ಮೇಲ್ಮನವಿಗಳು ಚಾಲ್ತಿಯಲ್ಲಿ ಇರುತ್ತವೆ ಎಂದರೆ ಸರಿ. ನಿಪಿ-23 ಮತ್ತು 24ರಲ್ಲಿ ನ್ಯಾಯಾಲಯದ ಆದೇಶ ಪಡೆಯುವಂತೆ ತಿಳಿಸಿರುವುದಿಲ್ಲ.

ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಹೆ.ದಿ.&ನ್ಯಾದಂ., ಗೋಕಾಕ.